ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎಂ. ಸತೀಶ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು ಮಾಹಿತಿ ನೀಡುವ ಬಗ್ಗೆ.

**ಶೂನ್ಯ ವೇಳೆಯ ಪ್ರಸ್ತಾಪ:**

**"ಬಳ್ಳಾರಿ ಜಿಲ್ಲೆಯಲ್ಲಿರುವ ರಾಬಕೊವಿ ಹಾಲು ಒಕ್ಕೂಟಕ್ಕೆ ಆಡಳಿತ ಮಂಡಳಿ ಸದಸ್ಯರ ಅವಧಿಯು ಮೇ-2024 ಕ್ಕೆ ಮುಗಿದಿದ್ದು, ಚುನಾವಣೆ ಮೂಲಕ ಹೊಸ ಆಡಳಿತ ಮಂಡಳಿಯನ್ನು ರಚಿಸಬೇಕಾಗಿತ್ತು. ಆದರೆ ಜಿಲ್ಲೆಗಳಿಗೆ ಸದಸ್ಯರ ಸಂಖ್ಯೆಯನ್ನು ನಿರ್ಧರಿಸುವಲ್ಲಿನ ತಾರತಮ್ಯದ ವಿಷಯವಾಗಿ ಪ್ರಕರಣವು ಹೈ-ಕೋರ್ಟ್ ಮೆಟ್ಟಿಲೇರಿ ಚುನಾವಣೆಗೆ ತಡೆಯಾಜ್ಞೆ ಇರುತ್ತದೆ. ಇದರಿಂದಾಗಿ ಚುನಾವಣೆ ನಡೆದಿರುವುದಿಲ್ಲ. ಆದರೆ ಹಾಲು ಒಕ್ಕೂಟದ ದಶಕದ ಬೇಡಿಕೆಯಾಗಿದ್ದ Mega Dairy ನಿರ್ಮಾಣಕ್ಕೆ KMERC ನಿಂದ 80 ಕೋಟಿಗಳ ಅನುದಾನವು ಬಿಡುಗಡೆಯಾಗಿದ್ದು, ಇದಕ್ಕೆ ಜಿಲ್ಲಾಡಳಿತವು ತಾಲ್ಲೂಕಿನ ಕೊಳಗಲ್ಲು ಬಳಿ 15 ಎಕರೆ ಭೂಮಿಯನ್ನು ನಿಗದಿಪಡಿಸಿ ಹಣ ನೀಡಿ ಖರೀದಿಸುವಂತೆ ಸೂಚಿಸಿರುತ್ತಾರೆ. ಆದರೆ ಆಡಳಿತ ಮಂಡಳಿ ಒಪ್ಪಿಗೆ ಇಲ್ಲದೆ ಭೂಮಿ ಖರೀದಿಗೆ ಹಣ ನೀಡಲು ಸಾಧ್ಯವಿಲ್ಲ ಹಾಗೂ ಅಡಳಿತ ಮಂಡಳಿ ಇಲ್ಲದೆ ರೈತರುಗಳಿಗೆ ನೀಡಬೇಕಾಗಿರುವ ಬಿಲ್ಲುಗಳು ಮತ್ತು ಸರ್ಕಾರದ ಸಹಾಯಧನವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಆದ ಕಾರಣ ಕೂಡಲೇ ಈ ರಾಬಕೊವಿ ಹಾಲು ಒಕ್ಕೂಟಕ್ಕೆ ಆಡಳಿತಾಧಿಕಾರಿ ನೇಮಕ ಮಾಡುವಂತೆ ಈ ಮೂಲಕ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ".**

**ಉತ್ತರ:**

ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ., ಬಳ್ಳಾರಿ ಈ ಒಕ್ಕೂಟದ ಕಾರ್ಯವ್ಯಾಪ್ತಿಯು ಪ್ರಸ್ತುತ ನಾಲ್ಕು ಜಿಲ್ಲೆಗಳಾಗಿದ್ದು, ಒಕ್ಕೂಟದ ಹಾಲಿ ಉಪ ನಿಯಮದ ಪ್ರಕಾರ ಆಡಳಿತ ಮಂಡಳಿಯಲ್ಲಿ 12 ನಿರ್ದೇಶಕರುಗಳಿದ್ದು, ವಿವರಗಳು ಈ ಕೆಳಗಿನಂತಿರುತ್ತವೆ:

ಅ) ರಾಯಚೂರು ಜಿಲ್ಲೆ 4 (03 ಸಾಮಾನ್ಯ ಸದಸ್ಯರು ಹಾಗೂ 01 ಮಹಿಳಾ ಸದಸ್ಯರು)
ಆ) ಬಳ್ಳಾರಿ ಜಿಲ್ಲೆ 4 (03 ಸಾಮಾನ್ಯ ಸದಸ್ಯರು ಹಾಗೂ 01 ಮಹಿಳಾ ಸದಸ್ಯರು)
ಇ) ಕೊಪ್ಪಳ ಜಿಲ್ಲೆ 4 (03 ಸಾಮಾನ್ಯ ಸದಸ್ಯರು ಹಾಗೂ 01 ಮಹಿಳಾ ಸದಸ್ಯರು)

ಒಕ್ಕೂಟವು ಉಪ ನಿಯಮ ತಿದ್ದುಪಡಿಗಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಲಬುರಗಿ ಪ್ರಾಂತ, ಕಲಬುರಗಿ ಇವರಿಗೆ ದಿನಾಂಕ:03-10-2023 ರಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಉಪನಿಯಮ ತಿದ್ದುಪಡಿಯಲ್ಲಿ ನಿರ್ದೇಶಕರ ಸ್ಥಾನವನ್ನು ಎಲ್ಲಾ ಜಿಲ್ಲೆಗಳಿಗೆ ಸಮಾನವಾಗಿ ಹಂಚಿಕೆ ಮಾಡದಿರುವುದರಿಂದ ಹಾಗೂ ಕೆಲವು ನ್ಯೂನ್ಯತೆಗಳು ಕಂಡುಬಂದಿದ್ದರಿಂದ ದಿನಾಂಕ:07-12-2023 ರಂದು ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿರುತ್ತದೆ. ತದನಂತರ ಒಕ್ಕೂಟವು ಪುನಃ ದಿನಾಂಕ:20-12-2023 ರಂದು ಮರುಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಒಕ್ಕೂಟವು ಈ ಹಿಂದೆ ಸಲ್ಲಿಸಲಾಗಿದ್ದ ಪ್ರಸ್ತಾವನೆಯಲ್ಲಿನ ಯಾವುದೇ ನ್ಯೂನ್ಯತೆಗಳನ್ನು ಸರಿಪಡಿಸದೇ ಹಾಗೂ ಆಡಳಿತ ಮಂಡಳಿಯ ಚುನಾಯಿತ ನಿರ್ದೇಶಕರ ಸ್ಥಾನಗಳನ್ನು ಭೌಗೋಳಿಕವಾಗಿ ನಾಲ್ಕು ಜಿಲ್ಲೆಗೆ ಸಮಾನವಾಗಿ ವಿಂಗಡಿಸದಿರುವುದರಿಂದ ಉಪ ನಿಯಮ ತಿದ್ದುಪಡಿ ಪ್ರಸ್ತಾವನೆಯನ್ನು ತಿರಸ್ಕರಿಸಿ ಒಕ್ಕೂಟಕ್ಕೆ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿರುತ್ತದೆ.

ಒಕ್ಕೂಟವು ಉಪನಿಯಮ ತಿದ್ದುಪಡಿ ಪ್ರಸ್ತಾವನೆ ತಿರಸ್ಕರಿಸಿರುವುದನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:101631/2024 ನ್ನು ದಾಖಲಿಸಿದ್ದು, ಸದರಿ ರಿಟ್ ಅರ್ಜಿಯು ದಿನಾಂಕ: 14-03-2024 ರಂದು ವಜಾಗೊಂಡಿರುತ್ತದೆ. ಸದರಿ ವಜಾಗೊಂಡ ರಿಟ್ ಅರ್ಜಿ ಆದೇಶವನ್ನು ಒಕ್ಕೂಟವು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ಪ್ರಶ್ನಿಸಿ ರಿಟ್ ಅಪೀಲು ಸಂಖ್ಯೆ 100173/2024 ನ್ನು ದಾಖಲಿಸಿದ್ದು, ಅದು ವಿಚಾರಣಾ ಹಂತದಲ್ಲಿರುತ್ತದೆ.

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರು ದಿನಾಂಕ:29-06-2024 ರಂದು ರಾಬಕೊವಿ ಹಾಲು ಒಕ್ಕೂಟಕ್ಕೆ ಕೊಳಗಲ್ಲು ಗ್ರಾಮದಲ್ಲಿ ಸರ್ವೆ ನಂ: 139/ಬಿ ರಲ್ಲಿನ 48.28 ಎಕರೆ ಜಮೀನಿನ ಪೈಕಿ 15 ಎಕರೆ ಜಮೀನನ್ನು ಮೆಗಾ ಡೈರಿಗಾಗಿ ಮಂಜೂರು ಮಾಡಿ ರೂ.2,92,01,070/- ಮೊತ್ತವನ್ನು ಪಾವತಿಸಲು ತಿಳಿಸಿರುತ್ತಾರೆ. ಈ ಬಗ್ಗೆ ಆಡಳಿತ ಮಂಡಳಿಯು ದಿ:29-08-2024 ರಂದು ನಡೆದ ಸಭೆಯಲ್ಲಿ ಚರ್ಚಿಸಿ ಜಮೀನಿನ ದರವನ್ನು ಕಡಿಮೆಗೊಳಿಸುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ಸಭಾಧ್ಯಕ್ಷರು ತಿಳಿಸಿರುತ್ತಾರೆ.

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ದಿನಾಂಕ:05-01-2024 ರಲ್ಲಿ ಒಕ್ಕೂಟದ ಆಡಳಿತ ಮಂಡಳಿ ಚುನಾವಣೆ ನಡೆಸಲು ಸಹಾಯಕ ಆಯುಕ್ತರು, ಬಳ್ಳಾರಿ ಇವರನ್ನು ರಿಟರ್ನಿಂಗ್ ಅಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಭಾರತ ಚುನಾವಣಾ ಆಯೋಗವು 2024 ರ ಲೋಕಸಭಾ ಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದ ಹಿನ್ನಲೆಯಲ್ಲಿ ಸರ್ಕಾರವು ತನ್ನ ಆದೇಶ ಸಂಖ್ಯೆ: ಸಿಒ 34 ಸಿಎಲ್‌ಎಮ್ 2024, ದಿನಾಂಕ:05.06.2024ರ ಆದೇಶದಲ್ಲಿ ಮಾರ್ಚ್-2024 ರಿಂದ ಜೂನ್-2024 ರ ಅಂತ್ಯದವರೆಗೆ ಸಹಕಾರ ಸಂಘಗಳ ಆಡಳಿತ ಮಂಡಳಿ ಅವಧಿ ಮುಗಿಯುವ ಹಾಗೂ ಚುನಾವಣೆ ದಿನಾಂಕಗಳನ್ನು ನಿಗದಿಪಡಿಸಿ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿರುವ ಎಲ್ಲಾ ಸಹಕಾರ ಸಂಘಗಳಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 28ಎ(5), 28(ಬಿ), 29ಎಫ್(4), 39(ಎ) ಗೆ ವಿನಾಯಿತಿ ನೀಡಿ ಮುಂದಿನ ಆದೇಶದವರೆಗೆ ಚುನಾವಣೆಗಳನ್ನು ಮುಂದೂಡಿ ಹಾಲಿ ಇರುವ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಅವಧಿಯನ್ನು ಮುಂದುವರೆಸಿ ಆದೇಶಿಸಿದ್ದ ಹಿನ್ನಲೆಯಲ್ಲಿ ಸದರಿ ಒಕ್ಕೂಟಕ್ಕೆ ಹಾಲಿ ಇರುವ ಆಡಳಿತ ಮಂಡಳಿಯು ಮುಂದುವರೆದಿರುತ್ತದೆ.

ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ: ಸಿಒ 34 ಸಿಎಲ್‌ಎಮ್ 2024(ಇ), ದಿನಾಂಕ: 13-06-2024ರಲ್ಲಿ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಚುನಾವಣೆಯನ್ನು ಯಾವ ಹಂತದಲ್ಲಿ ನಿಂತುಹೋಗಿದೆಯೋ ಆ ಹಂತದಿಂದಲೇ ಲೋಕಸಭೆ ಚುನಾವಣೆಯು ಮುಕ್ತಾಯವಾದ ನಂತರ ಸದರಿ ಸಂಸ್ಥೆಗಳ ಚುನಾವಣಾ ಪ್ರಕ್ರಿಯೆ ಪ್ರಾರಂಭಿಸಲು ಆದೇಶಿಸಿರುತ್ತದೆ.

ಆದರೆ ಈಗಾಗಲೇ ಸಹಾಯಕ ಆಯುಕ್ತರು, ಬಳ್ಳಾರಿ ಹಾಗೂ ರಿಟರ್ನಿಂಗ್ ಅಧಿಕಾರಿಯವರು ಒಕ್ಕೂಟದ ಆಡಳಿತ ಮಂಡಳಿ ಚುನಾವಣೆ ನಡೆಸಲು ದಿನಾಂಕ: 20-06-2024 ರಂದು ಚುನಾವಣಾ ವೇಳಾಪಟ್ಟಿ ಹೊರಡಿಸಿ, ದಿನಾಂಕ:12-07-2024 ರಂದು ಮತದಾನದ ದಿನಾಂಕವನ್ನು ನಿಗದಿಪಡಿಸಿದ್ದರು. ಸದರಿ ಚುನಾವಣಾ ವೇಳಾ ಪಟ್ಟಿಯನ್ನು ಪ್ರಶ್ನಿಸಿ ಒಕ್ಕೂಟದ ನಿರ್ದೇಶಕರು, ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ.103589/2024 , ರಿಟ್ ಅರ್ಜಿ ಸಂಖ್ಯೆ.103590/2024 ದಾಖಲಿಸಿದ್ದು, ನ್ಯಾಯಾಲಯವು ಚುನಾವಣಾ ವೇಳಾಪಟ್ಟಿಗೆ ಮತ್ತು ಚುನಾವಣಾ ಪ್ರಕ್ರಿಯೆ ನಡೆಸಲು ತಡೆಯಾಜ್ಞೆ ನೀಡಿರುವುದರಿಂದ ಚುನಾವಣೆಯನ್ನು ಜರುಗಿಸಿರುವುದಿಲ್ಲ.

ಈ ಹಿನ್ನಲೆಯಲ್ಲಿ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಒ 34 ಸಿಎಲ್ಎಮ್ 2024, ದಿನಾಂಕ:05.06.2024ರ ಆದೇಶದಲ್ಲಿ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ಚುನಾವಣೆ ನಡೆದು ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವವರೆಗೆ ಹಾಲಿ ಇರುವ ಆಡಳಿತ ಮಂಡಳಿಗಳೇ ಮುಂದುವರೆಯತಕ್ಕದ್ದು ಎಂದು ಆದೇಶಿಸಿರುವ ಹಿನ್ನಲೆಯಲ್ಲಿ ರಾಬಕೊವಿ ಹಾಲು ಒಕ್ಕೂಟಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಪ್ರಮೇಯವು ಉದ್ಭವಿಸಿರುವುದಿಲ್ಲ.

**ಸಂಖ್ಯೆ: ಸಿಒ 154 ಸಿಸಿಬಿ 2024**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು